

ಹೆವೆರಾವೆಲಿಯರ್‌ನ ಅದ್ಭುತ ಬಿಸಿ ನೀರ ಬುಗ್ಗೆಗಳು

ಸ್ಯಾಂಡ್‌ವಿಚ್‌ಗಳನ್ನು ಒದ್ದೆಗೊಳಿಸದೆ ತಿನ್ನಲು ಪಟ್ಟ ಪ್ರಯತ್ನ ಈಗ ನೆನಪಿಸಿಕೊಂಡರೆ ಮೈ ನಡುಗುತ್ತದೆ.

ಮರುಭೂಮಿ, ಪರ್ವತ ಶ್ರೇಣಿಗಳಲ್ಲಿ ಮುಂದುವರೆದ ನಮ್ಮ ಪಯಣದ ಎರಡನೇ ದಿನದ ಸಂಜೆ ಕೊನೆಯಾದ ರೀತಿ ಮಾತ್ರ ಎಂದೂ ಮರೆಯುವಂತಹದಲ್ಲ. ಇನ್ನೇನು ದಿನ ಮುಗಿಯಿತು ಗುಡಾರ ಹಾಕಿ ವಿಶ್ರಾಂತಿ ಪಡೆಯೋಣ ಎಂದು ಯೋಚಿಸುತ್ತಿದ್ದಂತೆ, ಎಲ್ಲಾ ಕಡೆಯಿಂದಲೂ ನಮ್ಮನ್ನು ಸುತ್ತುವರೆದದ್ದು ಮೋಡಗಳ ದಂಡು. ಕೆಲವೇ ನಿಮಿಷಗಳಲ್ಲಿ ಕಡುಕಪ್ಪು ಪ್ರಚಂಡ ಮೋಡಗಳು ಧಾವಿಸಿ, ಆಕ್ರಮಿಸಿದ ಆವೇಶಕ್ಕೆ ನಾವು ಮತ್ತು ನಮ್ಮ ಸುತ್ತಲಿನ ಜಗತ್ತು, ಪರ್ವತ, ಭೂಮಿ. ಮರಳು, ಬಂಡೆ, ಕಲ್ಲು, ಮಣ್ಣು, ಆಕಾಶ ಎಲ್ಲವೂ  ಕಡು ಕಪ್ಪು. ಮುಂದಿನ ಹದಿನೈದು ಗಂಟೆಗಳನ್ನು ನಾವು ಕಳೆದದ್ದು ಭಯಾನಕ ಪರಿಸ್ಥಿತಿಯಲ್ಲಿ. ನಮ್ಮ ಗುಡಾರದ ಬಟ್ಟೆಗೆ ಸತತವಾಗಿ ನಿಲ್ಲದೆ ಒಂದೇ ಸಮನೆ ಬಡಿಯುತ್ತಿದ್ದ ಗಾಳಿ ಮತ್ತು ಮಳೆಯ ಸದ್ದು. ಮರುದಿನ ಮಧ್ಯಾಹ್ನ ಸುಮಾರು 12 ಗಂಟೆ ಹೊತ್ತಿಗೆ ಮಳೆಯ ರಭಸ ಕಮ್ಮಿಯಾಯಿತು. ನಿರ್ಜನತೆಯ ನಡುವೆ ನಮ್ಮ ಒದ್ದೆ ಸವಾರಿ ಶುರುವಾಯಿತು.  ತಲೆ ಒದ್ದೆ, ತಲೆಯ ಮೇಲಿನ ಟೋಪಿ ಒದ್ದೆ,, ತಲೆಯ ಕೆಳಗಿನ ಗಡ್ಡವೂ ಒದ್ದೆ. ಹೊರಗಿನ ಬಟ್ಟೆಗಳು ಒದ್ದೆ, ಒಳಗಿನ ಬಟ್ಟೆಗಳೂ ಒದ್ದೆ. ಬೂಟ್ಸು ಒದ್ದೆ, ಬೂಟ್ಸಿನ ಒಳಗಿನ ಸಾಕ್ಸು ಒದ್ದೆ, ಸುತ್ತಲೂ ಒದ್ದೆ, ಸೈಕಲ್ಲು ಒದ್ದೆ, ದೂರ ದೂರದ ತನಕ ಎಲ್ಲವೂ ಒದ್ದೆ.

ಸಾಯಂಕಾಲ ಐದು ಗಂಟೆ ಹೊತ್ತಿಗೆ ಮೋಡ ಸರಿದು, ಮಳೆ ನಿಂತಿತು, ಸೂರ್ಯ ಕಿರಣ ಏರಿತು, ಭೂಮಿ ಒಣಗಿತು, ಮೈ ಬಿಸಿಯಾಯಿತು. ಕೆಲವೇ ಸಮಯದಲ್ಲಿ ನಾವು ಹೆವೆರಾವೆಲಿಯರ್(Hveravellir) ಮುಟ್ಟಿ, ಅಲ್ಲಿನ ಬಿಸಿ ನೀರಿನ ಬುಗ್ಗೆಗಳಲ್ಲಿ ಮಾಡಲಿರುವ ಒಂದು ವಾರದ ಬಳಿಕದ ಮೊದಲ ಸ್ನಾನದ ಸಾಧ್ಯತೆ ನೆನೆದು ಖುಷಿ ಏರಿತು.

## ಗಂಧಕದ ವಾಸನೆಯ ಊರು

ಹೆವೆರಾವೆಲಿಯರ್, ಐಸ್‌ಲ್ಯಾಂಡ್‌ನ ಅದ್ಭುತ ಬಿಸಿ ನೀರ ಬುಗ್ಗೆಗಳ ತಾಣ. ಊರು ಪ್ರವೇಶಿಸುತ್ತಲೇ ಗಂಧಕದ ವಾಸನೆ ಸ್ವಾಗತಿಸುತ್ತದೆ. ಚೆನ್ನಾಗಿ ಕಟ್ಟಿದ ಸ್ನಾನಘಟ್ಟದೊಳಗೆ, ಎರಡು ಪ್ರತ್ಯೇಕ ಕಾಲುವೆಗಳ ಮೂಲಕ ಕುದಿಯುವ ಬಿಸಿ ನೀರು ಮತ್ತು ಕೊರೆಯುವ ಶೀತ ನೀರು ಹದವಾಗಿ ಬೆರೆಸಿ ದೊಡ್ಡ ಸಂಖ್ಯೆಯಲ್ಲಿ ಇದಕ್ಕೆಂದೇ ಇಲ್ಲಿಗೆ ಬರುವ, ತಂಗುವ ಪ್ರವಾಸಿಗಳಿಗೆ ಆಹ್ಲಾದಕರ ಜಳಕದ ಅನುಭವ ಕೊಡುತ್ತದೆ. ಬಿಸಿ ನೀರಿನೊಳಗೆ ಇಳಿದು ನಾವು ಮಾಡಿದ ಸ್ನಾನ ನಿಜಕ್ಕೂ ಅವಿಸ್ಮರಣೀಯ.

ನಮ್ಮ ಪ್ರವಾಸದ ಕೊನೆಯ ಹಂತದ, ಹೆವೆರಾವೆಲಿಯರ್‌ನಿಂದ ಬ್ಲೊಂಡಸ್ (Blonduos) ಪಟ್ಟಣಕ್ಕಿರುವ 115 ಕಿ.ಮೀ. ದಾರಿಯನ್ನು ಪ್ರಯಾಸವಿಲ್ಲದೆ ಕ್ರಮಿಸಿದೆವು. ದಾರಿ ಪೂರ್ತಿ ಪ್ರಕೃತಿಯನ್ನು ಸವಿಯುತ್ತಾ, ದಾರಿಯಲ್ಲಿ ಸಿಕ್ಕುವ ಚಿಕ್ಕ ಚೊಕ್ಕ ಕೆಫೆಗಳಲ್ಲಿ ತಿಂಡಿ ತಿನ್ನುತ್ತ, ಕಾಫಿ ಕುಡಿಯುತ್ತ, ಕೋಕ್ ಹೀರುತ್ತ, ಜೋಕಿಮನಿಗೆ ತಮಾಷೆ ಮಾಡುತ್ತ, ಮಜವಾಗಿ ಬ್ಲೊಂಡಸ್ ಮುಟ್ಟಿದೆವು. ಬ್ಲೊಂಡಸ್ ಸೊಬಗಿನ ಸಣ್ಣ ಊರು. ಅಲ್ಲೊಂದು ಜವುಳಿ ಉದ್ಯಮ ಮತ್ತು ಅದರ ಇತಿಹಾಸಕ್ಕೆ ಸಂಬಂಧಪಟ್ಟ ಮ್ಯೂಸಿಯಂ ಇದೆ. 18ನೇ ಶತಮಾನದ ಕಣ್ಮನ ಸೆಳೆಯುವ ಆಕರ್ಷಕ ಚರ್ಚ್ ಒಂದಿದೆ. ಊರಿಡೀ ಸುತ್ತಲು ಸುಂದರ ಕಾಲುದಾರಿಗಳಿವೆ. ಐಸ್‌ಲ್ಯಾಂಡ್ ಇತಿಹಾಸದಲ್ಲೇ ಅತೀ ದೀರ್ಘಕಾಲ 108 ವರ್ಷದ ಹಾಲ್‌ಡೋರಾ (Halldora Bjaradottir)ಎಂಬ ಮಹಿಳೆ ಬದುಕಿ, ಬಾಳಿದ ಊರು ಕೂಡಾ ಇದೇ. ಅಲ್ಲಿ ವಿಶ್ರಾಂತಿ ಪಡೆದು, ಬಸ್ಸು ಹಿಡಿದು, ಊರಿಗೆ ಮರಳುವ ವಿಮಾನ ಹಿಡಿಯಬೇಕಾದ, ಕೆಪ್ಲಾವಿಕ್ ನಗರಕ್ಕೆ ಮರಳಿದೆವು. ಜೂನ್ 24 ರಂದು ಐಸ್‌ಲ್ಯಾಂಡಿಗೆ ವಿದಾಯ ಹೇಳಿದೆವು.

ಸೈಕಲ್ ಸವಾರಿ ಎನ್ನುವುದು, ಕಾರು ಅಥವಾ ಬಸ್ಸು ಸವಾರಿಯ ಹಾಗಲ್ಲ. ಇದು ಮೈ, ಮನ ಪೂರ್ತಿ ತೆರೆದು ದೇಶ, ಜನ, ನಿಸರ್ಗವನ್ನು ಹತ್ತಿರದಿಂದ ನೋಡಲು, ಅರಿಯಲು. ಬೆರೆಯಲು, ಅರ್ಥ ಮಾಡಿಕೊಳ್ಳಲು ಪರಿಣಾಮ–ಕಾರಿ. ಜೊತೆಗೆ ಎಂತಹ ಪ್ರತಿಕೂಲ ಪರಿಸ್ಥಿತಿಯನ್ನೂ ನಿಭಾಯಿಸುವ  ಧೈರ್ಯ, ಸ್ಥೈರ್ಯ, ತಾಳ್ಮೆ, ಜಾಣ್ಮೆಯನ್ನು ಬೆಳೆಸಿ ನಿಮ್ಮ ಪೂರ್ತಿ ವಿಕಾಸಕ್ಕೆ ಸಹಕಾರಿ.

(ಅಂದ ಹಾಗೆ, ನನ್ನ ಪ್ರವಾಸದ ಈ ಕನ್ನಡ ಬರವಣಿಗೆ ನನ್ನ ತಂದೆ ಡಾ. ಸುಧಾಕರ್ ನಾಯಕ್ ಅವರು ಮಾಡಿದ್ದು.)